ವಿಮರ್ಶಕರು ತಾವು ನಂಬಿದ ಸಿದ್ಧಾಂತಗಳಾಚೆಯೂ ಕಾಣಿಸಿಕೊಳ್ಳುವ ಮಹತ್ವದ ಸಂಗತಿಗಳಿಗೆ ಸ್ಪಂದಿಸಬೇಕಾಗುತ್ತದೆ. ಆದರ್ಶಗಳನ್ನು ಇಟ್ಟುಕೊಂಡು ಕೂಡ ಆದರ್ಶವಾದಿಗಳನ್ನು ಪರೀಕ್ಷೆಗೊಡ್ಡಬೇಕು. ಮೈಸೂರಿನಲ್ಲಿ ನಮ್ಮ ಗೆಳೆಯ ರಾಮು ಇದ್ದರಲ್ಲ, ಅವರಂಥವರು ಕಲಿಸದೆಯೇ ಕಲಿಸುತ್ತಿರುತ್ತಾರೆ. ಅದು ಪ್ರೀಚಿಂಗ್ ಅಲ್ಲ, ಉಪದೇಶ ಅಲ್ಲ. ಆದರೆ ಅವರ ಬದುಕಿನ ಕ್ರಮ ಮತ್ತು ಯೋಚನಾ ಕ್ರಮ ನನ್ನಂಥವರನ್ನು ಬದಲಾವಣೆ ಮಾಡುತ್ತಿರುತ್ತದೆ. ನಾನು ಹಿರಿಯರಿಂದ ಎಷ್ಟು ಕಲಿತಿದ್ದೀನೊ ಕಿರಿಯರಿಂದಲೂ ಅಷ್ಟೇ ಕಲಿತಿದ್ದೇನೆ. ಮಗನೂ ಸೇರಿದಂತೆ ಮೊಮ್ಮಗನೂ ಸೇರಿದಂತೆ ಹಲವರು ಯಾವ್ಯಾವುದೋ ರೀತಿಯಲ್ಲಿ ನನ್ನ ಜೀವನದರ್ಶನವನ್ನು ರೂಪಿಸಿದ್ದಾರೆ. ಇವರೆಲ್ಲಾ ಕಲಿಸಿದರು ಅಂತ ಅಲ್ಲ. ನಾನು ಕಲಿತೆ. ಹಾಗೆ ಕಲಿಯುವ ಸನ್ನಿವೇಶವೊಂದು ತನಗೆ ತಾನೇ ನಿರ್ಮಾಣವಾಯಿತು.

ನೀವು ಕೇಳಿದ ಪ್ರಶ್ನೆಗೆ ಖಚಿತವಾದ ಉತ್ತರ ಹೇಳುವುದಾದರೆ, ಚಲನಶೀಲವಾದ ಮಾರ್ಕ್ಸ್‌ವಾದ, ಪ್ರೀತಿಕೇಂದ್ರಿತವಾದ ಸಂಬಂಧಸಂಹಿತೆ, 'ಭಾಷೆ'ಯೆಂಬ ಮಾಧ್ಯಮದ ಸೃಜನಶೀಲ ಸಾಧ್ಯತೆಗಳನ್ನು ಬಳಸಿಕೊಳ್ಳುವ, ವಿಸ್ತರಿಸುವ ಕಲಾಮೀಮಾಂಸೆ ನನ್ನ ಪ್ರೇರಕ ಸಂಗತಿಗಳು. ಹಾಗೆಯೇ ನಾನು ಆಕೃತಿ ಮತ್ತು ಆಶಯಗಳ ಎರಡರಿಯದ ಸಂಬಂಧವನ್ನು ಒಪ್ಪುತ್ತೇನೆ. ಮಾರ್ಕ್ಸ್‌ವಾದದ ನೆಲೆಗಟ್ಟಿಗೆ ವರ್ಣ ಮತ್ತು ಲಿಂಗಮೀಮಾಂಸೆಗಳೂ ಸೇರುತ್ತವೆ. ನೂರಕ್ಕೆ ನೂರರಷ್ಟು ನಾಸ್ತಿಕನಾದ ನನಗೆ 'ರ‍್ಯಾಶನಲಿಸಂ' ಆಚೆಗಿನ ಸಾಧ್ಯತೆಗಳ ಬಗ್ಗೆ ತೀವ್ರವಾದ ಕುತೂಹಲವಿದೆ.

◆ **ನೀವು ವಿಮರ್ಶೆಗೆ ತೊಡಗಿಕೊಂಡಾಗ ನಿಮ್ಮ ಕಣ್ಣೆದುರು ಹಲವು ಮಾದರಿಗಳಿದ್ದವು. ಆದರೆ ನಿಮಗೆ ಯಾವ ಮಾದರಿಗಳು ಹೆಚ್ಚು ಕಾಡಿದವು? ಜಾಗತಿಕ ಮಾದರಿಗಳಾದರೂ ಸರಿ, ಕನ್ನಡ ಮಾದರಿಗಳಾದರೂ ಸರಿ. ನಿಮ್ಮ ವಿಮರ್ಶಾ ಕಲ್ಪನೆಯನ್ನು ನಿರ್ಮಿಸಿದ ಮಾದರಿಗಳು ಯಾವುವು?**

ನಾನು ಓದು ಶುರುಮಾಡಿದಾಗ ಇದ್ದ ಸಾಹಿತ್ಯದ ವಾತಾವರಣವು ಮೊದಮೊದಲು ನನ್ನ ಮೇಲೆ ಹೆಚ್ಚು ಪ್ರಭಾವ ಬೀರಿತು. ನನ್ನ ಪೀಳಿಗೆಯ ಹಲವರು ನವ್ಯ ಕಾಲದ ಭರಾಟೆಯಲ್ಲಿ ಓದಿಗೆ ಹೆಚ್ಚು ತೆರೆದುಕೊಂಡವರು. ಆ ಕಾಲದಲ್ಲಿಯೇ ನಮಗೆಲ್ಲರಿಗೂ ಸಾಹಿತ್ಯ ಮತ್ತು ವಿಮರ್ಶೆಗೆ ಪ್ರವೇಶ ಲಭ್ಯವಾಯಿತು. ಆದರೆ, ನಾನು ಮತ್ತು ನನ್ನ ಕೆಲವು ಗೆಳೆಯರು ಸಾಕಷ್ಟು ಹಿಂದೆಯೇ ಓದು ಆರಂಭಿಸಿದವರು. ಕುವೆಂಪು, ಕಾರಂತ, ಮಾಸ್ತಿ, ಅನಕೃ, ನಿರಂಜನ, ಕಟ್ಟೀಮನಿ, ಚಂದಮಾಮ, ಕಸ್ತೂರಿ, ರೀಡರ್ಸ್ ಡೈಜೆಸ್ಟ್... ಇತ್ಯಾದಿ ಇತ್ಯಾದಿ. ನಾನು ವಿಜ್ಞಾನದ ವಿದ್ಯಾರ್ಥಿಯಾಗಿದ್ದರಿಂದ ವಿಜ್ಞಾನದ ತಿಳಿವಳಿಕೆಯಿತ್ತು. ಹೀಗೆ ನಾನು ಅನೇಕ ಬಗೆಯ ಓದುಗಳಿಗೆ ತೆರೆದುಕೊಂಡಿದ್ದೆ. ಆ ಕಾಲದಲ್ಲಿ ನಾವೆಲ್ಲರೂ ನವ್ಯವಿಮರ್ಶೆಯನ್ನು ಒಳಗೊಳ್ಳುವ ಮತ್ತು ಅದರ ಸೀಮಿತತಗಳನ್ನು ಮೀರುವ ಹಂಬಲವನ್ನು ಹೊಂದಿದ್ದೆವು. ಮಾರ್ಕ್ಸ್‌ವಾದದ ಆಶಯಗಳು ಮತ್ತು ನವ್ಯದ ಆಕೃತಿಮೀಮಾಂಸೆ ಎರಡನ್ನೂ ಒಟ್ಟಿಗೆ ಒಯ್ಯುವ ಹಂಬಲವೂ ನನಗಿತ್ತು. ನನ್ನೊಳಗೆ ಒಂದು ರೀತಿಯ ಕರ್ಷಣ ನಡೀತಿತ್ತು. ಅಡಿಗರ ಕಾವ್ಯವನ್ನೂ, ಚಿತ್ತಾಲ-ತೇಜಸ್ವಿ ಕತೆಗಳನ್ನೂ, ಅನಂತಮೂರ್ತಿ ಅವರ ವಿಮರ್ಶೆಯನ್ನೂ ಒಟ್ಟಿಗೆ ಹಿಡಿಯುವ ತುಮುಲವೂ ಇತ್ತು. ಕುವೆಂಪು, ಕಾರಂತ, ಪು.ತಿ.ನ. ಮುಂತಾದವರನ್ನು ಸಾರಾಸಗಟಾಗಿ ನಿರಾಕರಿಸುವುದು ಸಾಧ್ಯವೇ ಇರಲಿಲ್ಲ. ಬೆಂಗಳೂರು ವಿಶ್ವವಿದ್ಯಾಲಯದ ವಾತಾವರಣ ಮತ್ತು ನನ್ನ ಗೆಳೆಯರ ಬಳಗಗಳು

> ‘ ವಿಮರ್ಶಾ ಮಾದರಿಗಳನ್ನು ಅನುಕರಿಸುವುದು ಅಥವಾ ಅನುಸರಿಸುವುದರಲ್ಲಿ ನನಗೆ ಅಂಥ ನಂಬಿಕೆಯಿಲ್ಲ. ಇವೆಲ್ಲವುಗಳನ್ನು ಬಳಸಿಕೊಂಡು ವಿಮರ್ಶಾ ಮಾದರಿಗಳನ್ನು ಸೃಷ್ಟಿಸುವುದಿದೆಯಲ್ಲ ಅಥವಾ ಸ್ವತಃ ನಾವು ರೂಪುಗೊಳ್ಳುವ ಕ್ರಮವಿದೆಯಲ್ಲ, ಆ ಬಗೆಗೆ ನಾನು ಆಸಕ್ತ. ಒಬ್ಬ ಕವಿ, ಕತೆಗಾರ ತಾನು ಬರೆಯುವ ಕ್ರಮಗಳನ್ನು ಹೇಗೆ ಕಂಡುಕೊಳ್ಳುತ್ತಾನೊ/ಳೊ ಹಾಗೆಯೇ ವಿಮರ್ಶಕ ಕೂಡ ತನ್ನ ಬರೆಯುವ ಕ್ರಮಗಳನ್ನು ಕಂಡುಕೊಳ್ಳಬೇಕು.